**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 831/2014

**ಸಿ ಡಬ್ಲೂ** -5
**ಪಿ ಡಬ್ಲೂ** -4

**ಸಾಕ್ಷಿಯ ಹೆಸರು** - **ಶ್ರೀನಿವಾಸಲು**
**ತಂದೆಯ ಹೆಸರು** - **ಎನ್ ವೆಂಕಟೇಶ್ವರಲು**
**ವಯಸ್ಸು** - 41 **ವರ್ಷಗಳು**
**ಉದ್ಯೋಗ** - **ಸಹಾಯಕ ವ್ಯವಸ್ಥಾಪಕ, ಐಡಿಬಿಐ ಬ್ಯಾಂಕ್**
**ವಾಸಸ್ಥಳ** - **ಕರೀಂನಗರ , ತೆಲಂಗಾಣ**

**ಸಾಕ್ಷಿಯನ್ನು ದಿನಾಂಕಃ** 27-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಸಾಕ್ಷಿ ತೆಲುಗು ಬಾಷಿಕರಿದ್ದು ಶ್ರೀ ವಿ.ಜಿ ವಕೀಲರ ಸಹಾಯದಿಂದ ಅವರ ನುಡಿಸಾಕ್ಷ್ಯ ವನ್ನು ಕನ್ನಡಕ್ಕೆ ಅನುವಾದಿಸಿ ಪಡೆಯಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ದಿಃ **02-03-2013** ರಂದು ರೂ. **51,00,000/-** ಗಳ ಚೆಕ್ ಒಂದು ಹೊಸಪೇಟೆಯ ಎಚ್.ಡಿ.ಎಫ್.ಸಿ ಬ್ಯಾಂಕಿನಿಂದ ಎಸ್ಸಾರ್ ಟ್ರೆಡಿಂಗ್ ಕಾರ್ಪೋರೇಷನ್ ಹೆಸರಿಗೆ ಕ್ಲಿಯರನ್ಸ್ ಗಾಗಿ ಐ.ಡಿ.ಬಿ.ಐ ಬ್ಯಾಂಕಿಗೆ ಬಂದಿತ್ತು. ಸದರಿ ಚೆಕ್ ನಮ್ಮ ಬ್ಯಾಂಕಿನ ಗ್ರಾಹಕರಾದ ಡಾಲ್ಫಿನ್ ಇನ್ ಫ್ರಾ ಟವರ್ ಲಿಮಿಟೆಡ್ ರವರಿಗೆ ಸಂಬಂಧಿಸಿತ್ತು. ನಾನು ಸದರಿ ಗ್ರಾಹಕರಿಗೆ ಕರೆ ಮಾಡಿದಾಗ ತಲುಪಲು ಸಾಧ್ಯವಾಗಲಿಲ್ಲ. ಸದರಿ ಗ್ರಾಹಕರ ಖಾತೆ ಕಂಕೂರ್ ಗಂಚಿ, ಕೊಲ್ಕತ್ತಾ ತಾಖೆಯಲ್ಲಿ ಇತ್ತು. ಸದರಿ ಶಾಖೆಯವರು ಕ್ಲಿಯರಿಂಗ್ ಆಫಿಸರ್ ಗೆ ಕರೆ ಮಾಡಿ ಪ್ರಕರಣದಲ್ಲಿನ ಚೆಕ್ ವಂಚನೆಗೆ ಸಂಬಂಧಿಸಿದ ಚೆಕ್ ಆಗಿದ್ದು, ಪೆಮೆಂಟ್ ಮಾಡಬೇಡಿ ಎಂದು ತಿಳಿಸಿದ್ದರು. ಅದೇ ದಿನ ನಾನು ಮತ್ತು ನಮ್ಮ ವ್ಯವಸ್ಥಾಪಕರಾದ ಚಾಸಾ **-4** ರವರು ಹೊಸಪೇಟೆಯ ಎಚ್.ಡಿ.ಎಫ್.ಸಿ ಬ್ಯಾಂಕಿಗೆ

ಬಂದು ಸಂದಾಯವಾಗಿದ್ದು ರೂ. **51,00,000/-** ಗಳನ್ನು ಮರಳಿ ನಮ್ಮ ಬ್ಯಾಂಕಿನ ಖಾತೆಗೆ ಹಾಕಿಸಿರುತ್ತೇವೆ.

ಪೋಲಿಸರು **2013** ರಲ್ಲಿಯೇ ನಮ್ಮ ಬ್ಯಾಂಕಿಗೆ ಬಂದು ಪ್ರಕರಣದಲ್ಲಿನ ಚೆಕ್ ಅನ್ನು ನನ್ನ ಸಮಕ್ಷಮ ಜಪ್ತು ಮಾಡಿಕೊಂಡಿದ್ದರು. ಆಗ ಕ್ಲಿಯರಿಂಗ್ ಆಫಿಸರ್ ಸಂಗೀತಾ ಮತ್ತು ಶಾಖೆಯ ಮುಖ್ಯಸ್ಥರಾದ ಚಾಸಾ **-8** ರವರು ಇದ್ದರು. ಈ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ನಿಪಿಃ **1** ರ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ **1**(ಬಿ) ಎಂದು ಗುರುತಿಸಲಾಯಿತು. ಸದರಿ ಚೆಕ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಚೆಕ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದೆ. ಸದರಿ ಚೆಕ್ ನ ಸಂಖ್ಯೆ **157198** ಮತ್ತು ಖಾತೆ ಸಂಖ್ಯೆ **02631022000007382** ಎಂದು ಇತ್ತು. ಸದರಿ ಚೆಕ್ ಮೇಲೆ ದಿಃ **22-02-2013** ಎಂದು ದಿನಾಂಕ ನಮೂದಾಗಿತ್ತು.

**ಪಾಟೀ ಸವಾಲು ಆರೋಪಿ ಪರ ಶ್ರೀ ವಾಯ್.ಎಂ.ಎಂ ವಕೀಲರಿಂದಃ**

ಚೆಕ್ ನೊಂದಿಗೆ ಪೆಮೆಂಟ್ ಸ್ಲಿಪ್ ಮತ್ತು ವೋಚರ್ ಲಗತ್ತಿಸಿ ಬ್ಯಾಂಕಿಗೆ ಕೊಡಲಾಗುತ್ತದೆ ಅಂದರೆ ಸರಿ ಸಾಕ್ಷಿ ಮುಂದುವರೆದು ನಮಗೆ ಎಚ್.ಡಿ.ಎಫ್.ಸಿ ಬ್ಯಾಂಕಿನಿಂದ ಚೆಕ್ ಬಂದಿದ್ದರಿಂದ ಪೆಮೆಂಟ್ ಸ್ಲಿಪ್ ಮತ್ತು ವೋಚರ್ ಅದೇ ಬ್ಯಾಂಕಿನಲ್ಲಿ ಇರುತ್ತದೆ ನಮ್ಮ ಬ್ಯಾಂಕಿಗೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ ನ ಹೋಲ್ಡರ್ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಆದರೆ ಚೆಕ್ ಅನ್ನು ಡಾಲ್ಫಿನ್ ಇನ್ ಫ್ರಾ ಟವರ್ ಲಿಮಿಟೆಡ್ ನ ನಿರ್ದೇಶಕರು ಸಹಿ ಮಾಡಿರುವಂತೆ ಇತ್ತು. ಸದರಿ ಚೆಕ್ ನಮ್ಮ ಬ್ಯಾಂಕಿನಲ್ಲಿ ಕ್ಲಿಯರ್ ಆಗಿತ್ತು ಮತ್ತು ಅದರ ಆಧಾರದ ಮೇಲೆ ಪಾವತಿ ಆಗಿತ್ತು ಅಂದರೆ ಸರಿ. ಚೆಕ್ ಕ್ಲೀಯರ್ ಆಗುವ

ಸಂದರ್ಭದಲ್ಲಿ ಆ ಚೆಕ್‌ನ ಮೇಲೆ ಯಾವುದೇ ತಿದ್ದುಪಡಿ ಅಥವಾ ಬದಲಾವಣೆಗಳು ಆದ ಬಗ್ಗೆ ಕಂಡುಬಂದಿರಲಿಲ್ಲ ಅಂದರೆ ಸರಿ. ನಾವು ಚೆಕ್ ಅನ್ನು ನೋಡಿದಾಗ ಯಾವುದೇ ಮೋಸ ಅಥವಾ ವಂಚನೆ ಮಾಡುವ ಉದ್ದೇಶಕ್ಕಾಗಿ ನೀಡಿದ ಚೆಕ್ ನಂತೆ ಕಂಡುಬಂದಿರಲಿಲ್ಲ ಅಂದರೆ ಸರಿ.

ಸಾಮಾನ್ಯವಾಗಿ ಚೆಕ್‌ನೊಂದಿಗೆ ನೀಡುವ ಪೇ ಸ್ಲಿಪ್ ಮತ್ತು ವೋಚರ್ ಗಳ ಮೇಲೆ ಯಾವ ವ್ಯಕ್ತಿ ಚೆಕ್ ಹಾಜರುಪಡಿಸಿರುತ್ತಾನೋ ಆತನ ಹೆಸರು ಮತ್ತು ಸಹಿಗಳನ್ನು ಪಡೆಯಲಾಗುತ್ತದೆ ಅಂದರೆ ಸರಿ. ಕೊಲ್ಕತ್ತಾ ಶಾಖೆಯವರು ಲಿಖಿತವಾಗಿ ಚೆಕ್ ವಂಚನೆಗೆ ಸಂಬಂಧಿಸಿದ್ದು ಪಾಸ್ ಮಾಡಬೇಡಿ ಎಂದು ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ಸಾಕ್ಷಿ ಮುಂದುವರೆದು ಕರೆ ಮಾಡಿ ಮಾತ್ರ ತಿಳಿಸಿದ್ದರು ಎಂದು ನುಡಿಯುತ್ತಾರೆ. ಪೋಲಿಸರು ಬಂದಾಗ ಚೆಕ್ ಗೆ ಸಂಬಂಧಿಸಿ ಬೇರೆ ಯಾವುದೇ ದಾಖಲೆಯನ್ನು ನಮ್ಮಿಂದ ಜಪ್ತು ಪಡಿಸಿಕೊಂಡಿಲ್ಲ. ಕೇವಲ ಚೆಕ್ ಮಾತ್ರ ಜಪ್ತು ಪಡಿಸಿಕೊಂಡಿರುತ್ತಾರೆ.

ನಾನು ನಿಪಿಃ 1 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಮ್ಮ ಶಾಖೆಗೆ ಪೋಲಿಸರು ಬಂದು ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ನನಗೆ ಪಂಚನಾಮೆಗೆ ಪಂಚನಾಗಿ ಸಹಕರಿಸುವಂತೆ ನೋಟಿಸ್ ನೀಡಿರಲಿಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಶಾಖೆಯ ವ್ಯವಸ್ಥಾಪಕರ ಮಾತು ಕೇಳಿ ಬ್ಯಾಂಕಿನಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿಃ 2 ರ ಚೆಕ್ ಅನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.